# ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ಬೆಳವಣಿಗೆ

**ಸೋಮಶೇಖರ್ ಎಲ್. ಆರ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು.

**Received: 19/11/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619667**

## ABSTRACT:

ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಕೂಡಗೆ ಅಪಾರವಾದದ್ದು ಜನಪದ ಸಾಹಿತ್ಯದ ಕಾಲದಿಂದಲ್ಲೂ ಮಹಿಳೆಯರು ತಮ್ಮ ಅನುಭವಗಳನ್ನು ತಮ್ಮ ಆತಂಕವನನ್ನು, ತಮ್ಮ ನೋವು ನಲಿವುಗಳನ್ನು ಮೌಖಿಕವಾಗಿ ವ್ಯಕ್ತಪಪಡಿಸುತ್ತಾ ಬಂದಿದ್ದಾರೆ . ಪ್ರಾಚೀನ ಕಾಲದಿಂದಲ್ಲೂ ಮಹಿಳೆಯರು ತಮ್ಮ ಮನನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿ ಪಡಿಸಲು ಆಯ್ಕೆಮಾಡಿಕೊಂಡ ಮಾರ್ಗವೆ ಬರವಣಿಗೆ, ಈ ಬರವಣಿಗೆಯ ಮೂಲಕ ಮಹಿಳಾಲೋಕದ ಬದುಕಿನ ಚಿತ್ರಣವನ್ನು ಜನರ ಮುಂದಿಡಲು ಬರೆಯಲು ಪ್ರಾರಂಬಿಸುತ್ತಾರೆ ಸಾಹಿತ್ಯದಲ್ಲಿ ಹೆಣ್ಣು ಹೇಗೆ ಬರವಣಿಗೆಯನ್ನು ಪ್ರಾರಂಬಿಸಿ ಮುನ್ನೆಲೆಗೆ ಬಂದಿದ್ದಾರೆ ಅವರ ಪ್ರತಿಭಾಶಕ್ತಿ ಅವರ ಕ್ರೀಯಾಶೀಲತೆ ಬರವಣಿಗೆಯಲ್ಲಿ ವ್ಯಕ್ತವಾಗಿರುವುದನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ.

## KEYWORDS:

ಮಹಿಳಾ ಸಾಹಿತ್ಯ, ಜನಪದ, ಸ್ತ್ರೀ, ಶಿಕ್ಷಣ, ಶಿಷ್ಟ ಸಾಹಿತ್ಯ. ಅಭಿವ್ಯಕ್ತಿ ಸ್ವಾತಂತ್ರ, ಸಾಹಿತ್ಯ ರಚನೆ.

ಸಾಹಿತ್ಯದ ತಾಯಿ ಬೇರಾದ ಜನಪದ ಸಾಹಿತ್ಯದಲ್ಲಿ ಸ್ತ್ರೀಯರದ್ದೆ ಮೇಲುಗೈ. ಜನಪದ ಗೀತೆಗಳು, ಕಥೆಗಳು, ಲಾವಣಿ, ತ್ರಿಪದಿಗಳನ್ನು ಕಾಣಬಹುದಾಗಿದೆ. ಗ್ರಾಮೀಣ ಭಾಷೆ ಸೊಗಡಿನಿಂದ ಕೂಡಿ ಸಾಹಿತ್ಯದಲ್ಲಿ ಪ್ರಮುಖ ಪಾತ್ರವಹಿಸಿದೆ ಆದರೆ ಶಿಷ್ಟ ಹಾಗೂ ಗ್ರಂಥಸ್ಥ ಸಾಹಿತ್ಯದಲ್ಲಿ ಸ್ತ್ರೀ ಸಾಹಿತ್ಯಗಳು ವಿರಳವಾಗಿರುವುದನ್ನು ಕಾಣಬಹುದಾಗಿದೆ.

ಸ್ತ್ರೀಯರಿಗೆ ಶಿಕ್ಷಣ, ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆ ಎಲ್ಲಾ ಇಲ್ಲವಾಗಿದ್ದ ಸಂದರ್ಭದಲ್ಲಿ ಮಹಿಳಾ ಸಾಹಿತ್ಯವು ಅತ್ಯಂತ ಕಡಿಮೆ ಎಂದೆ ಹೇಳಬಹುದಾಗಿದೆ. ಮಹಿಳಾ ಸಾಹಿತ್ಯದ ಪ್ರಾಚೀನತೆಯನ್ನು ಗಮನಿಸುವುದಾದರೆ ಪ್ರಾಚೀನ ಕಾಲದಲ್ಲಿ ಬಾದಾಮಿಯ ಚಾಲುಕ್ಯರ ಅರಸ ಇಮ್ಮಡಿ ಪುಲಿಕೇಶಿಯ ಮಗನಾದ ಚಂದ್ರಾದಿತ್ಯನ ಪ್ರೇಯಸಿ ವಿಜ್ಜಿಕೆ (ವಿಜಯ ಮಹಾದೇವಿ) ಯ ಕೌಮುದಿ

ಮಹೋತ್ಸವ ಎಂಬ ಸಂಸ್ಕೃತ ನಾಟಕವನ್ನು ರಚಿಸಿದ್ದಾಳೆಂದು ತಿಳಿದು ಬಂದಿದೆ. ಅತ್ತಿಮಬ್ಬೆಯು ರನ್ನನ ಹಾಗೂ ಪೊನ್ನನ ಕೃತಿಗಳನ್ನು ಬರೆಸಿ ಹಂಚಿದಾಳೆಂದು ತಿಳಿದು ಬಂದಿದೆ. 12 ನೇ ಶತಮಾನದಲ್ಲಿ ಉಂಟಾದ ಕ್ರಾಂತಿಯಿಂದ ಸ್ತ್ರೀ ಪುರುಷರೆನ್ನದೇ ಸಾಹಿತ್ಯ ರಚನೆಗೆ ತೊಡಗಿದರು. ವಚನ ಸಾಹಿತ್ಯವು ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರವನ್ನು ನೀಡಿತು ಹಲವಾರು ಮಹಿಳಾ ವಚನಕಾರ್ತಿಯರು ತಮ್ಮ ನಿಲುವುಗಳನ್ನು ವಚನಗಳ ಮೂಲಕ ಪ್ರಕಟಿಸಿದರು. ಅಕ್ಕ ಮಹಾದೇವಿಯನ್ನು ಕನ್ನಡದ ಮೊದಲ ವಚನಕಾರ್ತಿ ಎಂದು ಕರೆಯುತ್ತಾರೆ. ಸಮಾಜದಲ್ಲಿನ ಪುರುಷ ಪ್ರಧಾನ ವ್ಯವಸ್ಥೆಯ ಬಗ್ಗೆ ಬಂಡಾಯದ ಧ್ವನಿಯಾಗಿ ಕಾಣಿಸಿಕೊಂಡಿದ್ದಾರೆ. ಸೂಳೆ ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ ಅಮುಗೆ ರಾಯಮ್ಮ ನೀಲಾಂಬಿಕೆ ಗಂಗಾಬಿಕೆ ಇನ್ನು ಮುಂತಾದ ವಚನಕಾರ್ತಿಯರನ್ನು ಗುರುತಿಸಬಹುದಾಗಿದೆ. 13 ರಿಂದ 16 ನೇ ಶತಮಾನದಲ್ಲಿ ಮಹಿಳಾ ಸಾಹಿತ್ಯವು ಮತ್ತೆ ಕಡಿಮೆಯಾಗುತ್ತದೆ. 17ನೇ ಶತಮಾನದಲ್ಲಿ ಸಂಚಿ ಹೊನ್ನಮ್ಮನ ಹದಿ ಬಧೆಯ ಧರ್ಮ ಕೃತಿ ಪ್ರಕಟಗೊಂಡಿತ್ತು ಇದು ಪತಿವ್ರತೆಯ ಧರ್ಮದ ಬಗ್ಗೆ ತಿಳಿಸುತ್ತದೆ. ಕೀರ್ತನಾ ಸಾಹಿತ್ಯದಲ್ಲಿ ಗಲಗಲಿ ಅವ್ವ ಹರಪ್ಪನಹಳ್ಳಿ ಭೀಮವ್ವ ಪ್ರಯಾಗ ಭಾಯಿ ರುಕ್ಮಿಣಿ ಭಾಯಿ ಹೆಸರುಗಳು ಮೂಂಚೂಣಿಯಲ್ಲಿ ಕಾಣಿಸಿಕೂಳ್ಳುತ್ತವೆ.

19ನೇ ಶತಮಾನದಲ್ಲಿ ದೇಶದಲ್ಲಿ ಸ್ವಾತಂತ್ರ ಚಳವಳಿಗಳು ನಡೆಯ ತೊಡಗಿದವು ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದ ಮಹಿಳೆಯರು ವಿದ್ಯಾವಂತರಾಗತೊಡಗಿದರು ಇದರ ಪರಿಣಾಮದಿಂದ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದರು . ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ನಂತರ ಸ್ತ್ರೀ ವಾದ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯವು ಅತ್ಯಂತ ಉತ್ತುಂಗವಾಗಿ ಬೆಳೆಯಿತು.

1908 ರಲ್ಲಿ ಶಾಂತಬಾಯಿ ನೀಲಗಾರ ಅವರ ಸದ್ಗುಣಿ ಕೃಷ್ಣಬಾಯಿ ಕೃತಿ ಬರೆದರು ಇದು ವಾಗ್ಭೂಷಣ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು. ನಂಜನಗೂಡಿನ ತಿರುಮಲಾಂಭರವರು 1913 ರಲ್ಲಿ ಸುಶೀಲೆ ಕಾದಂಬರಿಯನ್ನು ಬರೆದರು ಆರ್ ಕಲ್ಯಾಣಮ್ಮನವರು ಸುಧಾರಣ ಮನೋಭಾವಗಳನ್ನು ಹೊಂದಿದು ಕೇಶ ಮುಂಡನ ಸಮಸ್ಯೆ, ಬಾಲ್ಯ ವಿವಾಹ, ಮಡಿ ಮೈಲಿಗೆ, ವಿಧವಾ ಸಂಕಷ್ಟಗಳನ್ನು ಮುಖ್ಯ ವಿಷಯಗಳನ್ನಾಗಿಸಿಕೊಂಡು ಕಥೆ, ಕಾದಂಬರಿ, ನಾಟಕ, ಲೇಖನಗಳನ್ನು ಬರೆದರು. ತಿರುಮಲಾಂಭರವರು 1913 ರಲ್ಲಿ 'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಆರಂಭಿಸಿದರು. 1916 ರಲ್ಲಿ 'ನಂದಿನಿ' ಪತ್ರಿಕೆಯನ್ನು ಪ್ರಾರಂಬಿಸಿ ಸಾಹಿತ್ಯವಲಯದಲ್ಲಿ ಸಂಚಲನವನ್ನು ಉಂಟುಮಾಡಿದರು. ಆರ್ ಕಲ್ಯಾಣಮ್ಮನವರು 1917 ರಲ್ಲಿ 'ಸರಸ್ವತಿ' ಪತ್ರಿಕೆಯನ್ನು ಆರಂಭಿಸಿ ಮಹಿಳಾ ಬರಹಗಾರರಿಗೆ ಅವಕಾಶ ಮಾಡಿಕೊಟರು. ತಿರುಮಲೆ ರಾಜಮ್ಮನವರು ಕಾವ್ಯ, ನಾಟಕ, ಬರೆದರು ಅವರ ಪ್ರಮುಖ ಕೃತಿಗಳೆಂದರೆ

ತಪಸ್ವಿನಿ, ಮಹಾಸತಿ, ವಾತ್ಸಲ್ಯ, ತರಂಗಲೀಲಾ, ದುಂದುಭಿ ಮುಂತಾದವುಳನ್ನು ರಚನೆ ಮಾಡಿದರು.

ಕೂಡಗಿನ ಗೌರಮ್ಮನವರು ಗಿರಿಬಾಲೆಯನ್ನು ರಚಿಸಿದರು. ಸರಸ್ವತಿ ಬಾಯಿ ರಾಜವಾಡೆ ಎಚ್. ವಿ. ಸಾವಿತ್ರಮ್ಮ ಸಾಮಾಜಿಕ ಸುಧಾರಣೆಯ ಮನೋಧರ್ಮಗಳನ್ನು ಸಾಹಿತ್ಯದಲ್ಲಿ ತಂದರು. ಬೆಳಗೆರೆ ಜಾನಕಮ್ಮ 'ಕಲ್ಯಾಣ' ಎಂಬ ಕವನ ಸಂಕಲನವನ್ನು ರಚಿಸಿದರು. ಶಾಂತಾದೇವಿ ಮಾಳವಾಡ ಹಲವಾರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯಕ್ಕೆ ಅಪಾರವಾದ ಕೂಡುಗೆಯನ್ನು ನೀಡಿದ್ದಾರೆ. ಸೀತಾದೇವಿ ಪಡುಕೋಣೆಯವರು ಹಿಂದಿ, ಕೊಂಕಣಿ, ಕನ್ನಡದಲ್ಲಿ ಸಾಹಿತ್ಯವನ್ನು ರಚಿಸಿದರು. ಜಯದೇವಿ ತಾಯಿ ಲಿಗಾಡೆ 'ಸೋದರಿ' ಎಂಬ ವಾರ ಪತ್ರಿಕೆಯನ್ನು ಮಹಿಳೆಯರಿಗೆ ಅರಿವಿನ ಹಾಗೂ ಪ್ರಗತಿಯ ಮಾಹಿತಿಯನ್ನು ನೀಡಿದರು. ತ್ರಿವೇಣಿಯವರು ಹಲವಾರು ಪ್ರಸಿದ್ದ ಕಾದಂಬರಿಗಳನ್ನು ರಚಿಸಿದರು ಬೆಳ್ಳಿ ಮೋಡ, ಶರಪಂಜರ, ಬೆಕ್ಕಿನ ಕಣ್ಣು ಮುಂತಾದ ಮನೋವಿಜ್ಞಾನಿಕವಾದ ಕೃತಿಗಳನ್ನು ರಚಿಸಿದರು. ಎಂ ಕೆ ಇಂದಿರಾ ತಮ್ಮ ಇಳಿಯ ವಯಸ್ಸಿನಲ್ಲಿ ಸಾಹಿತ್ಯ ರಚನೆಯಲ್ಲಿ ತೂಡಗಿ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಗೆಜ್ಜೆ ಪೂಜೆ, ತುಂಗಾ ಭದ್ರ, ಜಾತಿಗೆಟವಳು, ಸದಾನಂದ ಇನ್ನು 49 ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ.

1970 ರಲ್ಲಿ ದಲಿತ ಬಂಡಾಯ ಸಾಹಿತ್ಯವು ಉಗಮವಾಗತೂಡಗಿತು ಇದರ ತರುವಾಯ ಸ್ತ್ರೀಯರ ಸ್ಥಾನಮಾನಗಳು ಬದಲಾಗತೂಡಗಿದವು. 20ನೇ ಶತಮಾನದಲ್ಲಿ ಹಾಗೂ 21 ನೇ ಶತಮಾನಗಳಲ್ಲಿ ಸ್ತ್ರೀಯರ ಬದುಕಿನಲ್ಲಿ ಅಪಾರವಾದ ಬದಲಾವಣೆಗಳು ಕಂಡು ಬಂದವು. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನು ತಾವು ಸಕ್ರಿಯವಾಗಿ ತೂಡಗಿಸಿಕೊಂಡರು ಸಾಹಿತ್ಯ ವಲಯದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಬರಹಗಾರು ಕಂಡುಬರುತ್ತಾರೆ. ಗೀತಾ ನಾಗಭೂಷಣರವರ 'ಹಸಿ ಮಾಂಸ – ಹದ್ದುಗಳು, ಮಾಪುರ ತಾಯಿ ಮಕ್ಕಳು ಬದುಕು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಬಿ,ಟಿ. ಲಲಿತಾ ನಾಯಕ್‌ರ ಹಬ್ಬ ಮತ್ತು ಬಲಿ, ಕೆ ಷರೀಪಾರವರ ಪಾಂಚಾಲಿ, ಬುರ್ಖಾ, ವೈದೇಹಿಯವರ ಅಸ್ಪಶ್ಯರು ಅನುಪಮಾ ನಿರಂಜನರವರ ಘೋಷಾ ಮುಂತಾದ ಕೃತಿಗಳು ಪ್ರಭಾವ ಬೀರಿದವು.

1975 ರಲ್ಲಿ ಅಂತರಾಷ್ಟ್ರೀಯಾ ಮಹಿಳಾ ವರ್ಷದ ಆಚರಣೆಯ ಸಲುವಾಗಿ ಸ್ತ್ರೀ ಬರಹಗಳು ಜಾಗತಿಕ ಮಟ್ಟದಲ್ಲಿ ಸುದ್ದಿ ಮಾಡಿದವು. ಶೈಲಜಾ ಉಡಚಣ, ಸ ಉಷಾ, ಎಚ್ ಎಲ್ ಪುಷ್ಪ, ಚ. ಸರ್ವಮಂಗಳಾ ವೀಣಾ ಶಾಂತೇಶ್ವರ ಶಾಂತಾ ದೇವಿ ಕಣವಿಯವರ ಬರಹಗಳು ಮುಖ್ಯವಾಗಿವೆ. ಪ್ರತಿಭಾ ನಂದ ಕುಮಾರ್ ,

ಹೇಮಾ ಪಟ್ಟಣ ಶೆಟ್ಟಿ, ಸವಿತಾ ನಾಗಭೂಷಣ, ಆರ್ ಸುನಂದಮ್ಮ, ಎಚ್.ಎಸ್. ಶ್ರೀಮತಿಯವರು ಬರವಣಿಗೆಯಲ್ಲಿ ಮೂಂಚೂಣಿಯಲ್ಲಿದ್ದಾರೆ. ಮುಸ್ಲಿಂ ಸಮುದಾದಲ್ಲಿ ಮಹಿಳೆಯರ ಮೇಲೆ ನಡೆಯುವ ಹಲವಾರು ದೌರ್ಜನ್ಯಗಳನ್ನು ಸಾ,ರಾ ಅಬೂಬಕ್ಕರ್, ಭಾನು ಮುಷ್ತಾಕ್ ತಮ್ಮ ಬರವಣಿಗೆಯಲ್ಲಿ ತಿಳಿಸಿದ್ದಾರೆ. ಪಾಶ್ಚಾತ್ಯ ಸ್ತ್ರೀ ವಾದವು ಪ್ರಮುಖವಾದ ಪ್ರಭಾವನ್ನು ಬೀರಿ ಮಹಿಳಾ ಸಾಹಿತ್ಯವು ಹೆಚ್ಚು ಹೆಚ್ಚು ರಚನೆಯಾಗಳು ಸಹಕಾರಿಯಾಗಿದೆ. ನೇಮಿ ಚಂದ್ರ, ವಿಜಯಾ ದಬ್ಬೆ, ಮಲ್ಲಿಕಾ ಘಂಟಿ, ಸೀಮನ್ ದಬೋವಾ, ವರ್ಜಿನಿಯಾ ವುಲ್ಫ್ ಮುಂತಾದ ಪ್ರಮುಖ ಮಹಿಳಾ ಸಾಹಿತಿಗಳನ್ನು ಗುರುತಿಸಬಹುದಾಗಿದೆ. ಮಹಿಳಾ ಸಾಹಿತ್ಯವು ಆಧುನಿಕ ಕಾಲದಲ್ಲಿ ಅತ್ಯಂತ ಪ್ರಖರವಾಗಿ ಬೆಳೆದಿದೆ.

## ಪರಾಮರ್ಶನ ಗ್ರಂಥಗಳು:


1. ಶಕುಂತಲಾ ಸಿ ದುರಗಿ, (2019). ಮಹಿಳಾ ಸಾಹಿತ್ಯ ಮತ್ತು ಸಂವೇದನೆ, ಸಮನ್ವಯ ಪ್ರಕಾಶನ, ಕಲಬುರಗಿ.
2. ಮಲ್ಲಿಕಾಘಂಟಿ (ಸಂ), (2020), ಸ್ತ್ರೀವಾದಿ ಚಿಂತನೆ, ಕನ್ನಡ ಸಾಹಿತ್ಯ ಪರಿಷತು, ಬೆಂಗಳೂರು.
3. ಶಕುಂತಲಾ ಸಿ ದುರಗಿ, (1999). ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, ಪ್ರಜ್ವಲ ಪ್ರಕಾಶನ, ಕಲಬುರಗಿ.
4. ಲತ್ತಾ ಗುತ್ತಿ, (2011). ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ವಿಜಯಪುರ ವಿಶ್ವವಿದ್ಯಾಲಯ, ವಿಜಯಪುರ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.